# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಬೆಂಗಳೂರು

## ಪತ್ರಿಕಾ ಪ್ರಕಟಣೆ

**ವಿಷಯ: ಕೆಎಸ್‌ಆರ್‌ಟಿಸಿಗೆ ನಾಗರಿಕ ಸ್ನೇಹಿ ರಾಜ್ಯ ಮಟ್ಟದ ಇ-ಆಡಳಿತ ಪ್ರಶಸ್ತಿಯೊಂದಿಗೆ, ರೂ.5 ಲಕ್ಷಗಳ ನಗದು ಪುರಸ್ಕಾರ**

**31ನೇ ಆಗಸ್ಟ್ 2018, ವಿಧಾನಸೌಧ, ಬೆಂಗಳೂರು:** ನಾಗರಿಕ ಸ್ನೇಹಿ ಇ-ಆಡಳಿತ ಯೋಜನೆಗಳನ್ನು ರಾಜ್ಯ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳ ಹಾಗೂ ಸಂಸ್ಥೆಗಳಿಗೆ ರಾಜ್ಯ ಮಟ್ಟದ ಇ-ಆಡಳಿತ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿಯು ಅನುಷ್ಠಾನಗೊಳಿಸಿರುವ "Staff Duty Rota and Leave Management System" ಉಪಕ್ರಮಕ್ಕೆ **Excellence in Government Process Re-engineering** ವರ್ಗದಲ್ಲಿ ಲಭಿಸಿದ್ದು, ಪ್ರಶಸ್ತಿಯೊಂದಿಗೆ ರೂ.5.00 ಲಕ್ಷ ರೂಪಾಯಿಗಳ ನಗದು ಬಹುಮಾನ ಲಭಿಸಿರುತ್ತದೆ.

ದಿನಾಂಕ 31ನೇ ಆಗಸ್ಟ್ 2018 ರಂದು ವಿಧಾನಸೌಧದಲ್ಲಿ ನಡೆದ ಸಮಾರಂಭದಲ್ಲಿ ಸದರಿ ಪ್ರಶಸ್ತಿಯನ್ನು **ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ.ಟಿ.ಎಮ್. ವಿಜಯ ಭಾಸ್ಕರ್ ಭಾಆಸೇ ರವರು, ಶ್ರೀ.ಎಸ್.ಆರ್.ಉಮಾಶಂಕರ್, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು ಕೆಎಸ್‌ಆರ್‌ಟಿಸಿ** ರವರಿಗೆ ಪ್ರದಾನ ಮಾಡಿದರು. ಈ ಸಮಾರಂಭದಲ್ಲಿ ಶ್ರೀ.ರಾಜೀವ್ ಚಾವ್ಲಾ ಭಾಆಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ರವರು ಹಾಗೂ ನಿಗಮದ ಇನ್ನಿತರೆ ಅಧಿಕಾರಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

**ಸಹಿ/-**

**ಸಾರ್ವಜನಿಕ ಸಂಪರ್ಕಾಧಿಕಾರಿ**